**ದಿನಾಂಕ: 06-02-2021ರಂದು ಶನಿವಾರ ಬೆಳಗ್ಗೆ 10:00 ಘಂಟೆಗೆ ವಾರ್ಡ್ ಸಂಖ್ಯೆ:81 ವಿಜ್ಞಾನನಗರ ವಾರ್ಡಿನ M.E.G ಬಡವಣೆಯಲ್ಲಿರುವ ವಿವಿದೊದ್ದೇಶ ಕಟ್ಟಡದ ಸಭಾಂಗಣದಲ್ಲಿ ಶ್ರೀ.ಹನುಮಂತನಾಯ್ಕ ಟಿ,ತೋಟಗಾರಿಕೆ ಅಧಿಕ್ಷಕರು (Nodel Officer) ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

**ಹಾಜರಿದ್ದ ಅಧಿಕಾರಿಗಳು :**

| | |
|---|---|
| 1. | ಶ್ರೀ. ಸುರೇಶ್. ಎಲ್, ಕಿರಿಯ ಅಭಿಯಂತರರು, ವಾರ್ಡ್ ನಂ.81 ಹಾಗೂ ಸದಸ್ಯ ಕಾರ್ಯದರ್ಶಿ |
| 2. | ಶ್ರೀ. ಮೊಹಮ್ಮದ್ದ ಮುದಾಸೀರ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 3. | ಶ್ರೀಮತಿ.ಅಮೃತ ನಾಯ್ಕ್ ಕಂದಾಯ ನಿರಿಕ್ಷಕರು |
| 4. | ಶ್ರೀಮತಿ.ಸುವರ್ಣ ಕಿರಿಯ ಆರೋಗ್ಯ ಪರಿವಿಕ್ಷಕರು |
| 5. | ನಿವಾಸಿ ಕ್ಷೇಮಾಭಿವೃದ್ದಿ ಸಂಘ/ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ನಿವಾಸಿಗಳು ಹಾಗೂ ಸಾರ್ವಜನಿಕರು |

ಮಾನ್ಯ ಅಧ್ಯಕ್ಷರು ಹಾಜರಿದ್ದ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ರೆಸಿಡೆಂಟ್ಸ್ ವೆಲ್ಫೇರ್ ಆಸೋಸಿಯೆಷನ್‌ನ ಅಧ್ಯಕ್ಷರುಗಳು, ಪ್ರತಿನಿದಿಗಳು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಈ ಹಿಂದೆ ನಡೆದ ಸಭೆಯ ನಡವಳಿಗಳನ್ನು ಓದಿ ರೆಕಾರ್ಡ್ ಮಾಡಲಾಯಿತು.

ಶ್ರೀ.ವಿಶ್ವನಾಥ ಹೆರಳೆ ಮೊ: 9902918559 ರವರು ಮಾತನಾಡಿ ಹಿಂದಿನ ಸಭೆಯಲ್ಲಿ ಚರ್ಚಿಸಿದ್ದ ವಿಷಯಗಳ ಬಗ್ಗೆ ಪ್ರಗತಿಯನ್ನು ಕೇಳಿದರು. ಇದಕ್ಕೆ ವಾರ್ಡ್ ಅಭಿಯಂತರರು ಜೈನ್ ಹೈಟ್ಸ್ ಮುಂಭಾಗದಲ್ಲಿರುವ ದುರಸ್ಥಿಯಾದ ವಾಹನಗಳನ್ನು ತೆರವುಗೊಳಿಸಲು ಪತ್ರವನ್ನು ಠಾಣಾಧಿಕಾರಿಗಳು ಸಂಚಾರಿ ವಿಭಾಗ ರವರಿಗೆ ಬರೆದು ತೆರವುಗೊಳಿಸುವಂತೆ ಕೋರಿರುವುದಾಗಿ ತಿಳಿಸಿದರು.

ಅಭಿವೃದ್ದಿ ಕಾಮಗಾರಿಗಳ ಬಗ್ಗೆ ವಿಜ್ಞಾನ ನಗರದ ಮುಖ್ಯ ರಸ್ತೆಯ ದಕ್ಷಿಣ ಭಾಗಕ್ಕೆ ಕಾಮಗಾರಿಗಳನ್ನು ಪ್ರಾರಂಭಿಸಿದ್ದು ಪೂರ್ಣಗೊಂಡ ನಂತರ ಉತ್ತರ ಭಾಗದ ಅವಶ್ಯವಿರುವ ಕಡೆ ಸೂಚಿಸಿರುವಲ್ಲಿ ಕಾಮಗಾರಿಯನ್ನು ಪ್ರಾರಂಭಿಸುವುದಾಗಿ ತಿಳಿಸಿದರು.

ವಿಜ್ಞಾನ ನಗರ ಮತ್ತು ಬಸವನಗರ ಮುಖ್ಯ ರಸೆಯ ಅಗಲೀಕರಣ ಸಂಬಂಧ ರಸ್ತೆಮೂಲಬೂತ ಸೌಕರ್ಯ ವಿಭಾಗದಿಂದ ಕ್ರಮ ಕೈಗೊಳ್ಳತ್ತಿರುವುದಾಗಿ ತಿಳಿಸಿದರು.

ಕ್ರಮ: ವಾರ್ಡ್ ಅಭಿಯಂತರರು

ಬ್ರಿಗೆಡಿಯರ್ ಶ್ರೀ.ಕಡಪಟ್ಟಿ ಮೊ: 9901850851 ರವರು ಮಾತನಾಡಿ ಪಿ.ಡಬ್ಲ್ಯೂಡಿ. ಮುಖ್ಯ ರಸ್ತೆಯಲ್ಲಿ ಪೂಟ್‌ಪಾತ್ ಮೇಲೆ ತಳ್ಳುವ ಗಾಡಿಗಳು ಮತ್ತು ಅಂಗಡಿ ಮುಂಗಟ್ಟಗಳಿಂದ ಅತಿಕ್ರಮಣವಾಗಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಕೂಡಲೇ ತೆರವುಗೊಳಿಸುವಂತೆ ಕೋರಿದರು.

ಕೆ.ಪಿ.ಟಿ.ಸಿ.ಎಲ್ ಸಂಸ್ಥೆಗಳು ವಿದ್ಯುತ್ ಟ್ರಾನ್ಸಫಾರ್ಮರ್(RMU)ಗಳ ಹತ್ತಿರ ಅಳವಡಿಸಿರುವ ಕಾಂಕ್ರೀಟ್ ಮೆಟ್ಟಿಲುಗಳನ್ನು ಹಾಗೂ ಫುಟ್‌ಪಾತ್ ಮೇಲೆ ತೆರವುಗೊಳಿಸಿರುವ ವಿದ್ಯುತ್ ಕಂಬಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಸಾಗಿಸುವಂತೆ ಕೋರಿದರು.

ಅನಧಿಕೃತವಾಗಿ ಟ್ಯಾಂಕರ್‌ಗಳ ಮೂಲಕ ನೀರು ಸರಬಾರಾಜು ಮಾಡುತ್ತಿರುವುದನ್ನು ಸಭೆಯ ಗಮನಕ್ಕೆ ತಂದಿದ್ದು ಇವರಿಗೆ ಯಾವುದೇ ಕಟ್ಟು ಪಾಡುಗಳು ಇಲ್ಲದೇ ರಾಜರೋಷವಾಗಿ ನೀರನ್ನು ಮಾರುತ್ತಿದ್ದು ಇದಕ್ಕೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯಿಂದ ಕಾನೂನಾತ್ಮಕವಾಗಿ ಆರ್.ಟಿ.ಒಗಳಿಂದ ಟ್ಯಾಂಕರ್‌ಗಳನ್ನು ಸೀಜ್ ಮಾಡುವ ಹಾಗೂ ಕನಿಷ್ಠ ಮೊತ್ತವನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿಗೆ ಪಾವತಿಸಿಕೊಳ್ಳುವ ಮುಖಾಂತರ ನಿಯಂತ್ರಿಸುವಂತೆ ಕೋರಿದರು.

ಅನುಗ್ರಹ ಬಡಾವಣೆಯಲ್ಲಿನ ಬಹು ದಿನಗಳ ಬೇಡಿಕೆಯಾದ 50ಮೀ. ಪೈಪ್ ಲೈನ್ ಅಳವಡಿಸುವ ಕಾರ್ಯವನ್ನು ಒಂದು ತಿಂಗಳೊಳಗಾಗಿ ಪೂರ್ಣಗೊಳಿಸಿಕೊಡುವಂತೆ ಕೋರಿದರು.

ಕ್ರಮ: ವಾರ್ಡ್ ಅಭಿಯಂತರರು
ಸ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು

ಶ್ರೀಮತಿ.ಸತ್ಯ ವಾಣಿ ಮೊ.9964454083 ರವರು ಮಾತನಾಡಿ ತಲಕಾವೇರಿ ಬಡಾವಣೆಯಲ್ಲಿ ಕಾಮಗಾರಿಗಳು ಪ್ರಾರಂಭವಾಗಿದ್ದು ಪೂರ್ಣಗೊಳಿಸಿಕೊಡುವಂತೆ ಕೋರಿದರು.

ಖಾಸಗಿ ಸಹಭಾಗಿತ್ವದಲ್ಲಿ ವಾರ್ಡ್ ಬಡಾವಣೆಗಳ ಶುಚಿಯನ್ನು ಕಾಪಾಡಲು ನಿವಾಸಿ ಕ್ಷೇಮಾಭಿವೃದ್ಧಿ ಸಂಘ/ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ನಿವಾಸಿಗಳು ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸಲು ಒಂದು ದಿನ ಹೆಚ್.ಎಸ್.ಆರ್ ಬಡಾವಣೆಯಲ್ಲಿರುವ ಹಸಿಕಸ ಮತ್ತು ಒಣಕಸ ಬೇರ್ಪಡಿಸಿ ಗೊಬ್ಬರ ತಯಾರಿಸುವ ತರಬೇತಿ ಕೇಂದ್ರಕ್ಕೆ ಬೇಟಿ ನೀಡಲು ವಿನಂತಿಸಿದರು. ಇದಕ್ಕೆ ಅಧ್ಯಕ್ಷರು ದಿನಾಂಕ:11-02-2021ರ ಗುರುವಾರರಂದು ಆಸಕ್ತಿಯುಳ್ಳ ಎಲ್ಲರು ಹೋಗಿ ಪರಿವೀಕ್ಷಣೆ ಮಾಡಿಬರುವಂತೆ ಸೂಚಿಸಿದರು.

ಕ್ರಮ: ವಾರ್ಡ್ ಅಭಿಯಂತರರು
ಹಾಗೂ ಹಿರಿಯ ಆರೋಗ್ಯ ನಿರಿಕ್ಷಕರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಿರಿಯ ಅಭಿಯಂತರರು ಹಾಗೂ ಕಾರ್ಯದರ್ಶಿಗಳು
ವಾರ್ಡ್ ನಂ.81,ವಿಜ್ಞಾನ ನಗರ

ವಾರ್ಡ್ ಸಮಿತಿ ಅಧ್ಯಕ್ಷಕರು ಹಾಗೂ
ನೋಡೆಲ್ ಅಧಿಕಾರಿಗಳು

**ಪ್ರತಿಯನ್ನು:**

1. ಮಾನ್ಯ ಜಂಟಿ ಆಯುಕ್ತರು, ಬಿಬಿಎಂಪಿ, ಮಹದೇವಪುರ ವಲಯ ರವರ ಮಾಹಿತಿಗಾಗಿ ಗೌರವ ಪೂರ್ವಕವಾಗಿ ಸಲ್ಲಿಸಿದೆ.
2. ತೋಟಗಾರಿಕೆ ಅಧೀಕ್ಷಕರು, ಬಿ.ಬಿ.ಎಂ.ಪಿ ಮಹದೇವಪುರ ವಲಯ.

3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎ.ಎಲ್ ಏರ್‌ಪೋರ್ಟ್ ಉಪವಿಭಾಗ.
4. ಕಂದಾಯ ಅಧಿಕಾರಿಗಳು/ಸಹಾಯಕ ಕಂದಾಯ ಅಧಿಕಾರಿಗಳು/ನಿರೀಕ್ಷಕರು, ವಿಜ್ಞಾನ ನಗರ ವಾರ್ಡ್.
5. ಕಲ್ಯಾಣ ಶಾಖೆ ಅಧಿಕಾರಿಗಳು, ಬಿ.ಬಿ.ಎಂ.ಪಿ ಮಹದೇವಪುರ ವಲಯ
6. ಎಸ್.ಡಬ್ಲ್ಯೂ.ಎಂ, ಅಧಿಕಾರಿಗಳು/ಗುತ್ತಿಗೆದಾರರು, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ 9ನೇ ಮಹಡಿ, ಬೆಂಗಳೂರು-11.
7. ವಿದ್ಯುತ್ ವಿಭಾಗದ, ಅಧಿಕಾರಿಗಳು/ಗುತ್ತಿಗೆದಾರರು ವಿಜ್ಞಾನ ನಗರ ವಾರ್ಡ್.
8. ಆರೋಗ್ಯ ಅಧಿಕಾರಿಗಳು ವಿಜ್ಞಾನ ನಗರ ವಾರ್ಡ್.
9. ಸಹಾಯಕ ನಿರ್ದೇಶಕರು ಪಶುಪಾಲನೆ ಅಧಿಕಾರಿಗಳು/ಗುತ್ತಿಗೆದಾರರು ವಿಜ್ಞಾನ ನಗರ ವಾರ್ಡ್.
10. ಬಿ.ಡಬ್ಲ್ಯೂ.ಎಸ್.ಎಸ್.ಬಿ, ಅಧಿಕಾರಿಗಳು/ಗುತ್ತಿಗೆದಾರರು ವಿಜ್ಞಾನ ನಗರ ವಾರ್ಡ್.
11. ಟ್ರಾಫೀಕ್/ಸಿವಿಲ್ ಪೋಲಿಸ್, ವಿಜ್ಞಾನ ನಗರ ವಾರ್ಡ್.
12. ರೆಸಿಡೆನ್ಸ್ ವೆಲ್‌ಫೇರ್ ಅಸೋಸಿಯೇಷನ್ಸ್, ವಿಜ್ಞಾನ ನಗರ ವಾರ್ಡ್.
13. ವಾರ್ಡ್‌ಗೆ ಸಂಬಂಧಿಸಿದ ಎನ್.ಜಿ.ಓ,ಆರ್.ಡಬ್ಲ್ಯೂ.ಎ ಗಳು ವಿಜ್ಞಾನ ನಗರ ವಾರ್ಡ್.
14. ವಾರ್ಡ್‌ಗೆ ಸಂಬಂಧಿಸಿದ, ಎಸ್.ಸಿ/ಎಸ.ಟಿ ಸಂಘಟನೆಗಳು.
15. ವಾರ್ಡ್‌ನ ಆಸಕ್ತಿಯುಳ್ಳ ವಾಲೆಂಟಿಯರ್ಸ್.